ಗುಡಿಯ ಪಾವಿತ್ರ್ಯವನ್ನು ಹಾಳುಗೆಡುವುವುದು ಹಾಗೂ ಜನರನ್ನು ಧರ್ಮಭ್ರಷ್ಟರನ್ನಾಗಿ ಮಾಡಿ ಮತಾಂತರಕ್ಕೆ ಪುಸಲಾಯಿಸುವುದೇ ಈ ಶಿಲುಬೆ ಮಲೆಯ ಹಿಂದಿರುವ ಹುನ್ನಾರ ಎಂಬುದಾಗಿ ಹಚ್ಚಿಕ್ಕಿಕೊಡತೊಡಗಿತು. ಈ ಬೆಳವಣಿಗೆಯಿಂದ ಪರ ವಿರೋಧದ ಮಾತುಗಳು ಹುಟ್ಟಿಕೊಂಡವು. ಇದರಿಂದ ಮೊದಲಿನ ಕಾವಿಗೆ ಮತ್ತಷ್ಟು ಕಾವು ಕೂಡಿಕೊಂಡಿತು. ಇದರಿಂದ ಎಚ್ಚೆತ್ತುಕೊಂಡ ಪೊಲೀಸ್ ಇಲಾಖೆ ಗುಡಿಗೆ ನಾಲ್ವರು ಪೊಲೀಸರನ್ನು ಹಗಲು ರಾತ್ರಿ ಕಾಯುವಂತೆ ಕಾವಲು ಹಾಕಿತು.

ಆದರೆ, ಇದು ಅಪ್ಪಟ ಸುಳ್ಳು, ಬೇಕಂತಲೇ ಇಂಥದ್ದನ್ನೆಲ್ಲಾ ಹುಟ್ಟಾಕಿಕೊಂಡು ಅಡ್ನಾಡಿ ಗುಂಪೊಂದು ಜನರ ತಲೆಕೆಡಿಸುತ್ತಿರುವುದಲ್ಲದೆ ಹಳ್ಳಿಗಳ ಸಾಮರಸ್ಯವನ್ನು ಹಾಳು ಮಾಡುತ್ತಿದೆ ಎಂಬುದಾಗಿ ಕೆಲವು ಪ್ರಗತಿಪರ ಮನಸ್ಸುಗಳು ಎದುರೇಟು ಕೊಡಲು ತಯಾರಾದವು. ಇದನ್ನೆಲ್ಲಾ ಗಮನಿಸುತ್ತಿದ್ದ ಕ್ರೈಸ್ತ ಸಮಾಜದ ಮುಖಂಡರು ಏನಿಲ್ಲ ಎಂತಿಲ್ಲ ಇಲ್ಲದ ಉಸಾಬರಿ ತಮಗ್ಯಾಕೆ ಎಂಬಂತೆ ಶಿಲುಬೆ ಮಲೆಗೂ ನಮಗೂ ಯಾವುದೇ ಸಂಬಂಧವಿಲ್ಲವೆಂದು ಪತ್ರಿಕೆಗಳಲ್ಲಿ ಹೇಳಿಕೆಯನ್ನಿತ್ತರು. ಇಂಥದ್ದೊಂದು ಹೇಳಿಕೆಗಾಗಿಯೇ ಕಾಯುತ್ತಿದ್ದ ಸದರಿ ಸಂಘಟನೆಯವರು ಮತ್ತೂ ಚುರುಕಾಗಿ, 'ಕಳ್ಳನ ಮನಸು ಹುಳ್ಳುಳ್ಗೆ, ಕುಂಬ್ಳುಕಾಯಿ ಕಳ್ಳ ಅಂದ್ರೆ ಹೆಗಲ ಯಾಕೆ ಮುಟ್ಟಿ ನೋಡ್ಕೋಬೇಕು,' ಅಂತ ಹೇಳಿಕೊಂಡು ಅಡ್ಡಾಡಿದ್ದಲ್ಲದೆ, 'ನಿಲ್ಲಲಿ ನಿಲ್ಲಲಿ ಮತಾಂತರ ನಿಲ್ಲಲಿ, ಉಳಿಯಲಿ ಉಳಿಯಲಿ ನಮ್ಮ ಧರ್ಮ ಉಳಿಯಲಿ' ಮುಂತಾದ ಸ್ಲೋಗನ್‌ಗಳು ಸುತ್ತಲ ಹಳ್ಳಿಗಳಲ್ಲೂ ಮೊಳಗುವಂತೆ ನೋಡಿಕೊಂಡರು. ಇದಕ್ಕಾಗಿ ಧರ್ಮ, ಸಂಸ್ಕೃತಿ ಜಾಗೃತಾ ಸಭೆಗಳು ನಡೆದವು. ಬಾಲ್ರಾಜನ ಹಳ್ಳಿಯ ಜೊತೆಗೆ ಸುತ್ತಲ ಇತರ ಹಳ್ಳಿಗಳಲ್ಲೂ ಇಂಥ ವಾತಾವರಣ ಸೃಷ್ಟಿಯಾಯ್ತು. ಇದನ್ನು ಹಿಂಗೇ ಬಿಟ್ಟರೆ ಪರಿಸ್ಥಿತಿ ಕೈ ಮೀರುವುದನ್ನು ಅರಿತ ಕೆಲವರು ಇದಕ್ಕೆ ಪ್ರತಿಯಾಗಿ ಊರೂರುಗಳನ್ನು ಸುತ್ತಿ ಜನರ ಹತ್ತಿರ ಮಾತಾಡಿ ಅದೊಂದು ದಿನ ಶಿಲುಬೆ ಮಲೆಯ ಬಳಿಯೇ ಸಭೆ ನಡೆಸಲು ತೀರ್ಮಾನಿಸಿದರು. ಬಾಲ್ರಾಜನ ಹಳ್ಳಿಯಲ್ಲಿ ಪಂಚ್ಲಿಂಗಪ್ಪ ಇದರ ಪೂರಾ ನೇತೃತ್ವವನ್ನು ವಹಿಸಿಕೊಂಡು ಇನ್ನಿತರ ಹಳ್ಳಿಗಳಲ್ಲಿ ತನ್ನ ಗೆಳೆಯರನ್ನು ತನ್ನೊಂದಿಗೆ ಒಗ್ಗೂಡಿಸಿಕೊಂಡಿದ್ದ.

ಆ ಸಭೆ ಅವರು ಅಂದುಕೊಂಡಿದ್ದಕ್ಕಿಂಲೂ ಯಶಸ್ವಿಯಾಗಿ ನಡೆಯಿತು. 'ಇದು ನಮ್ಮ ಸಂವಿಧಾನದ ಮೇಲೆ ಹಾಗೂ ಜನರ ಆಯ್ಕೆ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ದಾಳಿ, ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ, ಇಂಥ ಪುಂಡಾಟಿಕೆಗೆ ಕೂಡಲೇ ಕಡಿವಾಣ ಹಾಕಬೇಕು, ಇಲ್ಲದೇ ಹೋದಲ್ಲಿ ನಾವೂ ಹೋರಾಟಕ್ಕಿಳಿಯಬೇಕಾಗುತ್ತೆ' ಎಂಬುದಾಗಿ ಎಚ್ಚರಿಕೆ ಠರಾವನ್ನು ರವಾನಿಸಿತು. ಇದರಿಂದ ಮತ್ತೆ ಹುರುಪುಗೊಂಡರೂ ತಮಗಾಗದ ಯಾರ ಮೇಲೇ ಆಗಲಿ ದೈಹಿಕವಾಗಿ ಹಲ್ಲೆ ಮಾಡಿದರೆ ಅದರ ಪರಿಣಾಮವನ್ನು ಎದುರಿಸುವಷ್ಟು ತಾಕತ್ತಿಲ್ಲದ್ದರಿಂದಲೂ ಅದು ತಮ್ಮ ಗುಪ್ತ ಅಜೆಂಡಾದ ಮೇಲೆ ವಿನಾ ಕಾರಣ ವ್ಯತಿರಿಕ್ತ ಪರಿಣಾಮ ಬೀರುತ್ತದೆಂಬ ಮುಂದಾಲೋಚನೆಯಿಂದಲೂ ಸದರಿ ಸಂರಕ್ಷಕಾ ಗುಂಪು ಮತ್ತೊಂದು ಮಗ್ಗುಲಿಂದ ಉತ್ತರ ಕೊಡಲು ಸಜ್ಜಾಗತೊಡಗಿತ್ತು. ಇದರ ಮುಂದುವರೆದ ಭಾಗವಾಗಿ ಅದೊಂದು ದಿನ ತಮ್ಮ ಆಲೋಚನಾ ಧಾಟಿಯನ್ನೇ ಪತ್ರಿಕಾ ಧರ್ಮವಾಗಿಸಿಕೊಂಡಿದ್ದ ಸಂಪಾದಕನೊಬ್ಬನನ್ನು ಭೇಟಿಯಾಗಿ ಶಿಲುಬೆ ಮಲೆಯ ಚಿತ್ರಣವನ್ನೊಪ್ಪಿಸಿ ಬಂದಿದ್ದರು. ಅದರ ಪರಿಣಾಮ ಮಾರನೆಯ ದಿನ 'ಶಿಲುಬೆ ಮಲೆಯ ಹೆಸರಿನಲ್ಲಿ ಮತಾಂತರಕ್ಕೆ ಕುಮ್ಮಕ್ಕು' ಎಂಬ ಶೀರ್ಷಿಕೆಯಡಿಯಲ್ಲಿ ಬಾಲ್ರಾಜನ ಶಿಲುಬೆ ಮಲೆ ರಾಜ್ಯದಾದ್ಯಂತ ಸುದ್ದಿಯಾಗಿಹೋಗಿತ್ತು. ಆ ಮೂಲಕ ಮತಾಂಧ ಮನಸ್ಸುಗಳನ್ನು ರೊಚ್ಚಿಗೇಳಿಸುವಲ್ಲಿ ಅದು ಸಫಲವಾಗಿತ್ತು. ಆಗ ಎಚ್ಚೆತ್ತ ಸರ್ಕಾರ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ನಡೆಸುವಂತೆ ಸರ್ಕಾರ ಹಿರಿಯ ಅಧಿಕಾರಿಯೊಬ್ಬನಿಗೆ ಸೂಚಿಸಿತು. ಅದರಂತೆ ಭೇಟಿ ಕೊಟ್ಟ ಆ ಅಧಿಕಾರಿ, 'ಸದರಿ ಊರಿನಲ್ಲಾಗಲಿ ಸುತ್ತಲ ಹಳ್ಳಿಗಳಲ್ಲಾಗಲಿ ಒಂದೇ ಒಂದು ಕ್ರಿಶ್ಚಿಯನ್ ಕುಟುಂಬ ಇಲ್ಲವೆಂದೂ ಇದನ್ನು ಎಲ್ಲರೂ ಪೂಜಿಸುತ್ತಿರುವರೆಂದೂ ಇಲ್ಲಿ